2) ಮಾನ್ಯ ಸಭಾಧ್ಯಕ್ಷರ ತೀರ್ಪು

ದಿನಾಂಕ:17.07.2015 ರಂದು ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ.ಬೋಪಯ್ಯ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ಆನಂದ ಮಾಮನಿ ಹಾಗೂ ಇತರರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 191ರ ಅಡಿ ರಾಜ್ಯ ಸರ್ಕಾರ ದಿನಾಂಕ:16.07.2015 ರಂದು ಕರ್ನಾಟಕ ಪ್ರವಾಸೋದ್ಯಮ ನೀತಿ 2015–2020ರ ಬಿಡುಗಡೆ ಕಾರ್ಯಕ್ರಮವನ್ನು ನಡೆಸಿದ್ದು, ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನವು ನಡೆಯುತ್ತಿರುವ ಸಮಯದಲ್ಲಿ ಸದನವನ್ನು ಕಡೆಗಣಿಸಿ ಸದನದ ಹೊರಗೆ ಸರ್ಕಾರದ ನೀತಿಯನ್ನು ಪ್ರಕಟಿಸಿರುವುದು ಸದನದ ಹಕ್ಕುಚ್ಯುತಿಯಾಗಿದೆ ಎಂದು ತಿಳಿಸಿ ಹಕ್ಕುಚ್ಯುತಿ ಪ್ರಸ್ತಾವನೆ ಮಂಡಿಸಲು ಅನುಮತಿ ಕೋರಿ ಸದನದಲ್ಲಿ ಪ್ರಸ್ತಾಪಿಸಿರುತ್ತಾರೆ. ಇದರ ಜೊತೆಗೆ ದಿನಾಂಕ:20.07.2015ರಂದು ಮಾನ್ಯ ಸದಸ್ಯರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಈ ಬಗ್ಗೆ ಪ್ರತ್ಯೇಕ ಪತ್ರವನ್ನು ನೀಡಿರುತ್ತಾರೆ.

ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ನನಗೆ ನೀಡಿರುವ ಹಲವಾರು ದಾಖಲಾತಿಗಳನ್ನು ಹಾಗೂ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಗಳನ್ನು ಗಮನಿಸಿದ್ದೇನೆ. ದಿನಾಂಕ:26.03.2015 ರಂದು ಪ್ರವಾಸೋದ್ಯಮ ಇಲಾಖೆಯು ಪ್ರವಾಸೋದ್ಯಮ ನೀತಿ 2015–2020 ರ ಬಗ್ಗೆ ಆದೇಶವನ್ನು ಹೊರಡಿಸಿದೆ ಹಾಗೂ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಿದೆ. ವಿಧಾನಸಭೆಯ ಮಾನ್ಯ ಸದಸ್ಯರಾದ ಡಾ॥ ಕೆ.ಸುಧಾಕರ್ ರವರು ದಿನಾಂಕ:08.07.2015ರಂದು, ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ.ಸೋಜಾ, ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ಅವರುಗಳು ದಿನಾಂಕ:03.07.2015 ರಂದು ಹಾಗೂ ಶ್ರೀಮತಿ ತಾರ ಅನುರಾಧ, ಅವರು ನಿಯಮ 72ರಡಿ ಕೇಳಿದ್ದ ಪ್ರಶ್ನೆಗಳಿಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ನೀಡಿರುವ ಲಿಖಿತ ಉತ್ತರವನ್ನು ಪರಿಶೀಲಿಸಿದ್ದೇನೆ.

ಕರ್ನಾಟಕ ವಿಧಾನ ಸಭೆಯಲ್ಲಿ 1968ರ ಸೆಪ್ಟೆಂಬರ್ 17ರಂದು, 1993ರ ಮಾರ್ಚ್ 01 ರಂದು ಹಾಗೂ ದಿನಾಂಕ:17.03.2006 ರಂದು ಅಂದಿನ ಮಾನ್ಯ ಸಭಾಧ್ಯಕ್ಷರು ನೀಡಿರುವ ತೀರ್ಪುಗಳಲ್ಲಿ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮಗಳನ್ನು ಸದನ ನಡೆಯುವ ಸಂದರ್ಭದಲ್ಲಿ ಸದನದ ಹೊರಗೆ ಪ್ರಕಟಿಸುವುದು ಸೌಜನ್ಯದ ಉಲ್ಲಂಘನೆಯಾಗುತ್ತದೆ (Breach of Courtesy) ಎಂದು ಹಾಗೂ ಪ್ರಾಕ್ಟೀಸ್ ಅಂಡ್ ಪ್ರೊಸಿಜರ್ ಆಫ್ ಪಾರ್ಲಿಮೆಂಟ್ ಪುಸ್ತಕದಲ್ಲಿ ಇಂತಹ ನಡವಳಿಕೆಗಳನ್ನು ಸಂಪ್ರದಾಯದ ಉಲ್ಲಂಘನೆ (Breach of Convention) ಎಂದು ಪರಿಗಣಿಸಬಹುದೆಂದು ತಿಳಿಸಲಾಗಿದೆ.

ದಿನಾಂಕ:16.07.2015 ರಂದು ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಕರ್ನಾಟಕ ಪ್ರವಾಸೋದ್ಯಮ ನೀತಿ 2015–2020ರ ಬಿಡುಗಡೆ ಕಾರ್ಯಕ್ರಮವನ್ನು ನಡೆಸಿದ್ದು, ಈಗಾಗಲೇ ಸರ್ಕಾರ ಪ್ರಕಟಿಸಿರುವ ಆದೇಶಗಳ ಮುಂದುವರೆದ ಭಾಗವಾಗಿರುವುದು ಕಂಡು ಬರುತ್ತದೆಯೇ ಹೊರತು ಹೊಸ ಕಾರ್ಯಕ್ರಮವಲ್ಲ. ಈ ಹಿನ್ನಲೆಯಲ್ಲಿ ಮಾನ್ಯ ಸದಸ್ಯರು ನೀಡಿರುವ ಸೂಚನೆಯು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲವೆಂದು ಪರಿಗಣಿಸಿ ಮಾನ್ಯ ಸದಸ್ಯರು ನೀಡಿರುವ ಸೂಚನೆಯನ್ನು ತಿರಸ್ಕರಿಸಿರುತ್ತೇನೆ.

– – * * * * – –

ಅಧ್ಯಕ್ಷರು: ಈಗ ವರದಿಯನ್ನೊಪ್ಪಿಸುವುದು.